**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆ:66/2013..</u>**

ದಿನಾಂಕಃ 30.11.2020
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 5 ಪ್ರಾಸಾ - 2

| | | |
|---|---|---|
| ಹೆಸರು | ಃ | ಪ್ರಶಾಂತ |
| ತಂದೆಯ/ಗಂಡನ ಹೆಸರು | ಃ | ನಾಗರಾಜು |
| ವಯಸ್ಸು | ಃ | 30 ವರ್ಷ |
| ಉದ್ಯೋಗ | ಃ | ಪೈಂಟಿಂಗ್ |
| ವಾಸಸ್ಥಳ | ಃ | ಚೌಡಯ್ಯಪಾಳ್ಯ |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಸಹೋದರ ಅತ್ತೆ ಕಾರಣ ಆಕೆ ನನ್ನ ಮೃತ ಸಹೋದರ ಮಾವ ನಂಜ ಹನುಮಯ್ಯನ ಪತ್ನಿ.

2. ನನಗೆ ಪ್ರಕರಣದ ಇತರ ಆರೋಪಿಗಳು ಗೊತ್ತಿರುತ್ತಾರೆ. ನನ್ನ ಸದರಿ ಸಹೋದರ ಮಾವ ತೀರಿ ಕೊಂಡು ಈಗಾಗಲೇ 9 ವರ್ಷ ಆಗಿದೆ. ನನ್ನ ಸಹೋದರ ಮಾವ ಬದುಕಿದ್ದಾಗ ನಾನು ಅವರ ಮನೆಯಲ್ಲಿಯೇ ವಾಸವಾಗಿದ್ದೇನು..

3. ಆ ಕಾಲಕ್ಕೆ ನನ್ನ ಊಟ ಉಪಚಾರಗಳನ್ನು ಸದರಿ ಆರೋಪಿ ಸಹೋದರ ಅತ್ತೆ ನೋಡಿಕೊಳ್ಳುತ್ತಿದ್ದರು. ಆ ಕಾಲಕ್ಕೆ ಸದರಿ ಆರೋಪಿ,

ನನ್ನ ಸಹೋದರ ಮಾವ, ನನ್ನ ತಾತ ಮತ್ತು ನಾನು ಒಂದೇ ಮನೆಯಲ್ಲಿ ವಾಸವಾಗಿದ್ದೇವು.

4. ಆರೋಪಿ ಸಹೋದರ ಅತ್ತೆಯ ತಮ್ಮ ಮತ್ತು ರಾಜಣ್ಣ ಆಗಾಗ್ಗೆ ನನ್ನ ಸಹೋದರ ಮಾವನ ಮನೆಗೆ ಬರುತ್ತಿದ್ದರು. ಹೀಗೆ ಬಂದಾಗಲೆಲ್ಲಾ ಅವರುಗಳು ನನ್ನ ಸಹೋದರ ಮಾವನ ಮನೆಯಲ್ಲಿ ಮದ್ಯ ಸೇವಿಸುತ್ತಿದ್ದರು. ನನ್ನ ಸಹೋದರ ಅತ್ತೆಯ ತಮ್ಮ ಮತ್ತು ರಾಜಣ್ಣ ಉಳಿದುಕೊಳ್ಳುವ ಅನಿವಾರ್ಯತೆ ಇದ್ದಲ್ಲಿ ನನ್ನ ಸಹೋದರ ಮಾವನ ಮನೆಯಲ್ಲಿ ಉಳಿದು ಕೊಳ್ಳುತ್ತಿದ್ದರು.

5. ದೂರು ನೀಡಿದ ನಂತರದ ಸಮಯದಲ್ಲಿ ನನ್ನ ಸಹೋದರ ಮಾವನ ಶವವನ್ನು ಶಾವನ ದುರ್ಗ ಅರಣ್ಯ ಜಾಗದಲ್ಲಿ ನೋಡಿದ್ದೇನೆ. ಅವರು ಕೊಲೆ ಮಾಡಲ್ಪಟ್ಟಿದ್ದರು.

6. ಆರೋಪಿತರು ಕೊಲೆ ಮಾಡಿರುವುದಾಗಿ ನಂತರ ತಿಳಿಯಿತು. ಕೊಲೆಯ ಕಾರಣ ನಮೂದಿಸಿ ನಾನು ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ, ಪರಿಶೀಲಿಸಿದೆ. ಈ ಸಾಕ್ಷಿಯ ಸಾಕ್ಷ್ಯವು ತನಿಖಾಧಿಕಾರಿ ಸಂಗ್ರಹಿಸಿದ ಸಾಕ್ಷ್ಯಕ್ಕೆ ವಿರುದ್ಧವಾಗಿ ಕಂಡುಬಂದಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವುದು ನ್ಯಾಯಸಮ್ಮತವಾಗಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

**<u>ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ</u>**

7. ನನ್ನ ಸಹೋದರ ಅತ್ತೆ ಮತ್ತು ಆರೋಪಿ ರಾಜಣ್ಣ ಇವರುಗಳ ನಡುವಿನ ಅನೈತಿಕ ಸಂಬಂಧಕ್ಕೆ ನನ್ನ ಸಹೋದರ ಮಾವ ಅಡ್ಡಿಯಾಗಿದ್ದರು ಎಂಬ ಕಾರಣಕ್ಕೆ ಆರೋಪಿತರು ನನ್ನ ಸಹೋದರ ಮಾವನನ್ನು ಕೊಲೆ ಮಾಡಿರುತ್ತಾರೆ ಎಂದು ನಮೂದಿಸಿ ನಾನು ತನಿಖಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

8. ಆರೋಪಿ ಅತ್ತೆ ಮನೆಯಲ್ಲಿ ಗುಸುಗುಸು ಮಾತನಾಡಿಕೊಳ್ಳುತ್ತಿದ್ದ ಹಿನ್ನೆಲೆಯಲ್ಲಿ ಅನುಮಾನ ಪಟ್ಟ ನನ್ನ ತಾತ ದೂರನ್ನು ನೀಡಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ</u> ಆರೋಪಿಯ ಪರವಾಗಿ ವಕೀಲರಿಂದಃ**

9. ನನ್ನ ತಂದೆ ಕೊರಟಗೆರೆಯಲ್ಲಿ ಇದ್ದರು. ನಾನು ಮತ್ತು ನನ್ನ ತಾಯಿ ನಾನು ಚಿಕ್ಕವನಿಂದಾಗಲೇ ತೀರಿ ಕೊಂಡಿದ್ದರು. ಪರಿಣಾಮ ನನ್ನ ಸಹೋದರ ಮಾವನ ಊರಿನಲ್ಲಿಯೇ ನಾನು ಹುಟ್ಟಿನಿಂದಲೂ ಸದರಿ ಸಹೋದರ ವಾಸವಾಗಿರುತ್ತೇನೆ.

10. ನನ್ನ ಸಹೋದರ ಮಾನ ನಂಜಹನುಮಯ್ಯನೇ ನನ್ನ ತಾಯಿಯ ಕೊಲೆಯನ್ನು ಮಾಡಿದ ಪರಿಣಾಮ ಕಾರಗೃಹ ಶಿಕ್ಷೆಯನ್ನು ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಸಹೋದರ ಮಾವ ಸಾಕಷ್ಟು ಮುಂಗೋಪಿಯಾಗಿದ್ದು ಹೆಚ್ಚಿನ ಪ್ರಮಾಣದಲ್ಲಿ ಮದ್ಯವನ್ನು

ಸೇವಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆದರೆ ನನ್ನ ಮಾವ ಊರಿನಲ್ಲಿ ಲೇವಾದೇವಿ ಹಣಕಾಸು ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. ಆದರೆ ಸದರಿ ಹಣ ಲೇವಾದೇವಿ ವ್ಯವಹಾರದಲ್ಲಿ ನನ್ನ ಸಹೋದರ ಮಾವನಿಗೂ, ಗ್ರಾಮದ ಇತರ ವಾಸಿಗಳಿಗೂ ಆಗಾಗೆ ಜಗಳಗಳು ಜರುಗುತ್ತಿದ್ದವು ಎಂದರೆ ಸರಿಯಲ್ಲ. ಗ್ರಾಮದ ಕೆಲ ಮಹಿಳೆಯರೊಂದಿಗೆ ನನ್ನ ಸಹೋದರ ಮಾವ ಅನೈತಿಕ ಸಂಬಂಧ ಹೊಂದಿದ್ದರು ಎಂದರೆ ಸರಿಯಲ್ಲ. ಸೂಚಿಸಿದ ನನ್ನ ಮಾವನ ಅನೈತಿಕ ಸಂಬಂಧದ ವಿಚಾರವಾಗಿ ನನ್ನ ಸಹೋದರ ಮಾವನಿಗೂ ಮತ್ತು ನನ್ನ ತಾಯಿಗೂ ಮಾತುಕತೆಯಾಗಿದ್ದು ಪರಿಣಾಮ ನನ್ನ ಸಹೋದರ ಮಾವ ನನ್ನ ತಾಯಿಯನ್ನು ಕೊಲೆಗೈಯಿದ್ದರು ಎಂದರೆ ನನಗೆ ಗೊತ್ತಿಲ್ಲ.

11. ರಾಜಣ್ಣ ನಾನು ನೆಲೆಸಿರುವ ಗ್ರಾಮದ ಪಕ್ಕದ ಗ್ರಾಮದವರು. ಮೃತ ರಾಜಣ್ಣ ಆರೋಪಿ ನನ್ನ ಸಹೋದರ ಮಾವನ ಜೊತೆಯಲ್ಲಿ ಕೆಲಸ ಕಾರ್ಯ ಮಾಡುತ್ತಿದ್ದರು ಎಂದರೆ ಸರಿ.

12. ನನ್ನ ಸಹೋದರ ಮಾವನ ಮನೆಯು ತೋಟದ ಮನೆಯಾಗಿತ್ತು ಎಂದರೆ ಸರಿ. ಸದರಿ ರಾಜಣ್ಣ ನನ್ನ ಸಹೋದರ ಮಾವನ ಕೃಷಿ ಕೆಲಸಗಳಲ್ಲಿ ತೊಡಗುತ್ತಿದ್ದರು ಮತ್ತು ಆತನ ಪಾಡಿಗೆ ಆತ ಮದ್ಯ ಸೇವನೆ ಮಾಡುತ್ತಿದ್ದರು ಎಂದರೆ ಸರಿ.

13. ಸದರಿ ರಾಜಣ್ಣ ಯಾವ ಕಾಲಕ್ಕೂ ಸಹ ನನ್ನ ಸಹೋದರ ಮಾವನ ಮನೆಯಲ್ಲಿ ಎಂದೂ ತಂಗಿರಲಿಲ್ಲ ಎಂದರೆ ಸರಿಯಲ್ಲ. ರಾಜಣ್ಣನ ಊರು ಮತ್ತು ನನ್ನ ಸಹೋದರ ಮಾವನ ಊರು ಅಕ್ಕ ಪಕ್ಕದ ಊರುಗಳಾಗಿದ್ದು ಅವುಗಳ ಅಂತರ ಕೇವಲ 100 ಮೀಟರ್.

14. ನನ್ನ ಸಮಕ್ಷಮ ಆರೋಪಿ ರಾಜಣ್ಣ ಯಾವ ಕಾಲಕ್ಕೂ ನನ್ನ ಸಹೋದರ ಮಾವನ ಮನೆಯಲ್ಲಿ ರಾತ್ರಿ ಸಮಯದಲ್ಲಿ ತಂಗಿರಲಿಲ್ಲ.

15. ಅದೇ ರೀತಿ ನನ್ನ ಆರೋಪಿ ಸಹೋದರ ಅತ್ತೆ ಮತ್ತು ರಾಜಣ್ಣನ ನಡುವೆ ಇತ್ತು ಎನ್ನಲಾದ ಅಕ್ರಮ ಸಂಬಂಧದ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ.

16. ಅಪರಾಧ ಜರಗಿತ್ತು ಎನ್ನಲಾದ ಸಮಯದಲ್ಲಿ ಸಹ ನಾನು ಪೈಂಟರ್ ಕೆಲಸ ಮಾಡುತ್ತಿದ್ದೇನು. ಸದರಿ ಪೈಂಟಿಗ್ ಕೆಲಸವು ನನ್ನ ಸ್ವಂತ ಕೆಲಸವಾಗಿತ್ತು. ನಾನು ಬೇರಯವರಲ್ಲಿ ಕೆಲ ಸ ಮಾಡುತ್ತಿರಲಿಲ್ಲ.

17. ಸದರಿ ಕೆಲಸ ಕುರಿಂತಂತೆ ನಾನು ಯಾವುದೇ ದಾಖಲಾತಿಗಳನ್ನು ಹೊಂದಿರುವುದಿಲ್ಲ. ಸಾಮಾನ್ಯವಾಗಿ ಪೈಂಟಿಂಗ್ ಕೆಲಸ ಮಾಡುವವರು ಬೆಳಿಗ್ಗೆ ಮನೆ ಬಿಟ್ಟರೆ ಸಂಜೆಯೇ ಮನೆಗೆ ಹಿಂದಿರುಗುತ್ತಾರೆ ಎಂದರೆ ಸರಿ.

18. ನನ್ನ ಸಹೋದರ ಮಾವ ಕಾಣೆಯಾದ ಬಳಿಕವು ಆರೋಪಿ ಸಹೋದರ ಅತ್ತೆ ಮನೆಯಲ್ಲಿಯೇ ಇದ್ದರು ಎಂದರೆ ಸರಿ. ನನ್ನ

ಸಹೋದರ ಮಾವನ ಸ್ವತ್ತುಗಳೆಲ್ಲವೂ ನನ್ನ ಇನ್ನೊಬ್ಬ ಸಹೋದರ ಮಾವ ತನ್ನ ಹೆಸರಿಗೆ ಮಾಡಿಕೊಂಡು ಅನುಭವಿಸುತ್ತಿದ್ದಾರೆ ಎಂದರೆ ನನ್ನ ತಾತ ಹೆಸರಿನಲ್ಲಿ ಇದೆ.

19. ನನ್ನ ಮೃತ ಸಹೋದರ ಮಾವನಿಗೆ ಒಂದು ಗಂಡು ಮತ್ತು ಒಂದು ಹೆಣ್ಣು ಮಗು ಇದೆ. ನಾನು ಮತ್ತು ನನ್ನ ಇನ್ನೊಬ್ಬ ಸಹೋದರ ಮಾವ ಹಾಗೂ ನನ್ನ ತಾತ ಆರೋಪಿ ಸಹೋದರ ಅತ್ತೆಗೆ ಮನೆಗೆ ಬಾರದ ಹಾಗೆ ತಾಕಿತ್ತು ಮಾಡಿ ಬೆದರಿಕೆ ಹಾಕಿರುತ್ತೇವೆ ಎಂದರೆ ಸರಿಯಲ್ಲ.

20. ನನ್ನ ಸಹೋದರ ಅತ್ತೆಗೆ ಧಕ್ಕಬಹುದಾದ ಸ್ವತ್ತುಗಳನ್ನು ಪರಭಾವಗೊಳಿಸುವ ಸಲುವಾಗಿ ನಾನು ನನ್ನ ತಾತ ಹಾಗೂ ಇತರ ಮಾತಿನ ಮೂಲಾಜಿಗೆ ಅಸತ್ಯ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

21. ನಾನು ಈಗಲೂ ಸಹ ನನ್ನ ಮತ್ತೊಬ್ಬ ಸಹೋದರ ಮನೆಯಲ್ಲಿ ಇದ್ದೇನೆ ಎಂದರೆ ಸರಿ . ಆದರ ಸದರಿ ಕಾರಣಕ್ಕೆ ನನ್ನ ಮತ್ತೊ ಬ್ಬ ಸಹೋದರ ಮಾವನ ಮಾತಿನ ಮೂಲಾಜಿಗೆ ಅಸತ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ.

22. ನಾನು ಈಗಾಗಲೇ ಉಲ್ಲೇಖಿಸಿದ ಅಕ್ರಮ ಸಂಬಂಧ ಹಾಗೂ ಕೊಲೆಯ ಕಾರಣಗಳು ಕುರಿತಂತೆ ಅಸತ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.